1	2	3
Dakshina Kannada	9	2
Kolar	16	6
Kodagu	–	–
Mandya	4	2
Mysore	15	15
Raichur	7	5
Shimoga	2	1
Tumkur	6	2
Bangalore (Rural)	38	19
Total	175	123

ವಿಷಯ:- ಕಗ್ಗದಾಸಪುರಕ್ಕೆ ಕುಡಿಯುವ ನೀರಿನ ಯೋಜನೆಯ ಪೂರೈಕೆ.

32(124)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

1. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕೆ.ಆರ್. ಪುರ ಅಧಿಸೂಚಿತ ಪ್ರದೇಶ ಸಮಿತಿಯ ಕೃಷ್ಣರಾಜಪುರ ಗ್ರಾಮದಲ್ಲಿ ಮತ್ತು ಹೆಚ್.ಎ.ಎಲ್. ಸ್ಯಾನಿಟರಿ ಬೋರ್ಡಿನ ಕಗ್ಗದಾಸಪುರ ಗ್ರಾಮದಲ್ಲಿ ನೀರಿನ ಯೋಜನೆಗಳು ಅರ್ಧ ಮಾತ್ರ ಕಾರ್ಯಗತವಾಗಿದ್ದು, ಈ ಯೋಜನೆಯನ್ನು ಪೂರೈಸಲು ಯಾವಕ್ರಮ ಕೈಗೊಳ್ಳಲಾಗುವುದು;

2. ಇನ್ನು ಮುಂದೆ ಕೃಷ್ಣರಾಜಪುರ ಮತ್ತು ಮಹಾದೇವಪುರ ನಗರ ಸಭೆಗಳಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆಯೇ? ಇಲ್ಲದಿದ್ದಲ್ಲಿ, ಈ ಸಂಸ್ಥೆಯ ಬದಲು ಯಾವ ಸಂಸ್ಥೆಯು ಈ ಯೋಜನೆಯನ್ನು ಇನ್ನು ಮುಂದೆ ತೆಗೆದುಕೊಳ್ಳಲಾಗುತ್ತದೆ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಕೃಷ್ಣರಾಜಪುರ ಹೆಚ್.ಎ.ಎಲ್. ಸ್ಯಾನಿಟರಿ ಬೋರ್ಡಿನ ಕಗ್ಗದಾಸಪುರ ಗ್ರಾಮದಲ್ಲಿ ನೀರಿನ ಅಭಾವ ನಿವಾರಣೆಗೆ ಠೇವಣಿ ಕೊಡುಗೆ ಆಧಾರದ ಮೇಲೆ ರೂ. 4.995 ಲಕ್ಷಗಳಿಗೆ ಅಂದಾಜು ವೆಚ್ಚದಲ್ಲಿ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಇದರಲ್ಲಿ ಸಂಬಂಧಿಸಿದ ಮುಖ್ಯಾಧಿಕಾರಿಗಳು

ಕೇವಲ 2.00 ಲಕ್ಷ ರೂ.ಗಳನ್ನು ಮಾತ್ರ ಮಂಡಳಿಯಲ್ಲಿ ಠೇವಣಿ ಇಟ್ಟಿರುತ್ತಾರೆ. ಆದರೂ ಇಲ್ಲಿಯವರೆಗೆ ಈ ಕಾಮಗಾರಿಗಳಿಗೆ 3,25,240 ರೂ. ಗಳಷ್ಟು ಕಾಮಗಾರಿಯನ್ನು ಮಾಡಲಾಗಿದೆ. ಆದ್ದರಿಂದ ಉಳಿದ ಠೇವಣಿ ನೀಡಿದ ತಕ್ಷಣ ಬಾಕಿ ಕಾಮಗಾರಿಗಳನ್ನು ಪೂರೈಸಲಾಗುವುದು.

ಆ) ಇಲ್ಲ. ಇನ್ನು ಮುಂದೆ ಈ ಪ್ರದೇಶದಲ್ಲಿನ ಕೆಲಸಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮಾಡಬೇಕಾಗಿದೆ.

ವಿಷಯ:- ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳ ಬಗ್ಗೆ.

33(123)

ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) 1995-96 ಹಾಗೂ 96-97ನೇ ಸಾಲುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನೀಯರ ಹಾಸ್ಟೆಲ್‌ಗಳು ಎಷ್ಟು ಮಂಜೂರಾಗಿರುತ್ತವೆ. ಯಾವ ಯಾವ ಸ್ಥಳಕ್ಕೆ ಮಂಜೂರು ಮಾಡಲಾಗಿರುತ್ತೆ;

ಆ) ಹೊಸದಾಗಿ ಕಟ್ಟಡಗಳನ್ನು ಕಟ್ಟಲು 1996-97ನೇ ಸಾಲಿಗೆ ಎಷ್ಟು ಹಣ ಮಂಜೂರಾಗಿರುತ್ತದೆ; ಈ ಹಣದಲ್ಲಿ ಯಾವ ಯಾವ ಸ್ಥಳಗಳಿಗೆ ಎಷ್ಟು ಎಷ್ಟು ಹಣ ಮಂಜೂರಾಗಿರುತ್ತದೆ;

ಇ) ಈ ಮಂಜೂರಾದ ಪೈಕಿ ಎಷ್ಟು ಹಾಸ್ಟೆಲ್‌ಗಳು ಪ್ರಗತಿಯಲ್ಲಿರುತ್ತವೆ; ಎಷ್ಟು ಹಾಸ್ಟೆಲ್‌ಗಳು ಪ್ರಾರಂಭಿಸಲಾಗಿರುತ್ತವೆ; ಎಷ್ಟು ಹಾಸ್ಟೆಲ್‌ಗಳು ಪ್ರಾರಂಭವಾಗಿರುವುದಿಲ್ಲ?

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) 1995-96 ಮತ್ತು 96-97ನೇ ಸಾಲುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಾರಂಭಿಸಲು ಮಂಜೂರಾತಿ ನೀಡಿರುವ ಮೆಟ್ರಿಕ್‌ಪೂರ್ವ:ಮೆಟ್ರಿಕ್‌ನಂತರದ ವಿದ್ಯಾರ್ಥಿ-ನಿಲಯಗಳ ವಿವರ ಕೆಳಕಂಡಂತಿರುತ್ತದೆ.

1995-96	1996-97
159	50

ವಿದ್ಯಾರ್ಥಿನಿಲಯಗಳು ಮಂಜೂರಾಗಿರುವ ಸ್ಥಳಗಳ ಪಟ್ಟಿಯನ್ನು ಅನುಬಂಧ- 1 ಮತ್ತು 2 ರಲ್ಲಿ ನೀಡಿದೆ.

ಆ) 1996-97ನೇ ಸಾಲಿಗೆ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ 400 ಲಕ್ಷ ರೂ. ನಿಗಧಿಪಡಿಸಿದ್ದು, (ಈ ಹಣದಲ್ಲಿ ರಾಜ್ಯದ ಪಾಲು ಶೇ. 50 ಭಾಗ ಅಂದರೆ 200 ಲಕ್ಷ ರೂ.ಗಳು ಕೇಂದ್ರ ಸರ್ಕಾರದ ಪಾಲು ಶೇ. 50 ಭಾಗ ಅಂದರೆ 200 ಲಕ್ಷ ರೂ.ಗಳು) ಇದರ ಜೊತೆಗೆ ರಾಜ್ಯ ಯೋಜನೆಯಲ್ಲಿ 75 ಲಕ್ಷ ರೂ.ಗಳನ್ನು ಒದಗಿಸಿಕೊಳ್ಳಲಾಗಿದೆ.